ಮಾವಿನ ಮರಗಳ ಹಿಂದೆ ಸೂರ್ಯ ಮುಳುಗುತ್ತಿರುವಂತೆ, ಆ ಹಳ್ಳಿಯ ಪಶ್ಚಿಮ ದಿಗಂತವೆಲ್ಲವೂ ಬಣ್ಣಗಳಲ್ಲಿ ಅದ್ದಿ ತೆಗೆದಂತಾಗಿತ್ತು. ಆ ಹೊತ್ತಿಗೆ ರಹೀಮಖಾನ ಹೊಲದಿಂದ ಮನೆಗೆ ಮರಳುತ್ತಿದ್ದ. ಐವತ್ತು ವರ್ಷ ಮಿಕ್ಕಿದ್ದರೂ ಆತ ಸದೃಢ ಹಾಗೂ ಶಕ್ತಿಶಾಲಿಯಾಗಿದ್ದ. ಹೆಗಲ ಮೇಲೆ ನೇಗಿಲು ಹೊತ್ತು ತನ್ನ ಎರಡೂ ಎತ್ತುಗಳನ್ನು ಹೊಡೆದುಕೊಂಡು, ಪುಂಡಾಟಿಕೆ ಹಾಗೂ ದ್ವೇಷ ಹೊಗೆಯಾಡುತ್ತಿದ್ದ ಆ ಹಳ್ಳಿಯ ಮುಖ್ಯಬೀದಿಗುಂಟ ನಡೆದು ಬರುತ್ತಿದ್ದ. ಪ್ರತಿ ಸಂಜೆ ತಂಬಾಕು ಸೇದಲೆಂದು ಸುಮಾರು ಒಂದು ಡಜನ್ ಒಕ್ಕಲಿಗರು ಪಂಚಾಯತಿ ಕಟ್ಟೆಯ ಬಳಿ ಜಮಾಯಿಸುತ್ತಿದ್ದರು. ರಹೀಮಖಾನ ಆ ಪಂಚಾಯತಿ ಕಟ್ಟೆಯ ಹತ್ತಿರ ಬರುತ್ತಿದ್ದಂತೆ, ಅಲ್ಲಿದ್ದವರ ಗೊಡ್ಡು ಹರಟೆಯ ಏರುದನಿ ಕುಗ್ಗಿ, ಜಾಗ್ರತೆಯ ಪಿಸುದನಿಯಾಯಿತು. ಆತ ಅಲ್ಲಿಂದ ಆ ಓಣಿಯ ಮೂಲೆ ದಾಟಿ ಮರೆಯಾಗುತ್ತಿದ್ದಂತೆ ಆತನ ಗಡಸು ಹೆಜ್ಜೆಗಳ ಸದ್ದು ಅಡಗಿದೊಡನೆ, ಕಲ್ಲೇಶಿ ತನ್ನ ಕೈಯಲ್ಲಿದ್ದ ಸಾಮೂಹಿಕ ಹುಕ್ಕಾವನ್ನು ಮತ್ತೊಬ್ಬನ ಕೈಗೆ ನೀಡುತ್ತ, ''ಕಲ್ಲು ಹೃದಯದ ಪಿಶಾಚಿ ಹೊರಟಿದೆ ನೋಡಿ'' ಎಂದು ಟೀಕಿಸಿದ. ಮಿಠಾಯಿಗಾರನಾಗಿದ್ದ ನಾನ್ಯಾ ಆತನ ಮಾತಿಗೆ ತನ್ನ ಮಾತನ್ನೂ ಸೇರಿಸಿದ. ದಿನದಿಂದ ದಿನಕ್ಕೆ ಆತನ ಕ್ರೌರ್ಯ ಹೆಚ್ಚುತ್ತಲೇ ಸಾಗಿದೆ. ನಿನ್ನೆಯಷ್ಟೆ, ತನ್ನ ಎತ್ತುಗಳಿಗೆ ಕಲ್ಲು ಹೊಡೆದ ಎಂಬ ಕಾರಣಕ್ಕೆ ಆತ ಬಡಪಾಯಿ ರಾಮೂನ ಮಗನನ್ನು ಥಳಿಸಿದ. ಅಲ್ಲದೆ ರಹೀಮಖಾನನ ಇತ್ತೀಚಿನ ಕ್ರೂರ ವರ್ತನೆಗಳ ಬಗ್ಗೆ, ಅಧಿಕಪ್ರಸಂಗಿಯಾದ ಜೇಲರ್ ರಾಮನಾಥ ಒಂದೊಂದಾಗಿ ವಿವರಿಸುತ್ತ, 'ಆ ದಿನ ಆತನ ಹೊಲದಲ್ಲಿ ಮೇಯುತ್ತಿದ್ದ ನನ್ನ ಕುದುರೆಯನ್ನು ಕೊಂದೇ ಬಿಡುತ್ತಿದ್ದ' ಎಂದ. ಆದರೆ ಅಲ್ಲಿ ಆ ಕುದುರೆ ಮೇಯಲು ಮಸಲತ್ತು ಮಾಡಿದವರು ತನ್ನ ಕುಹಕಿ ಮಕ್ಕಳೇ ಎಂಬ ವಿಷಯವನ್ನು ಬಚ್ಚಿಟ್ಟ. ಬಿಳಿಗೂದಲಿನ ಮುದಿ ಪಟೇಲ ಯಾವಾಗಲೂ ಕಟ್ಟಕಡೆಗೆ ತನ್ನ ಬಚ್ಚಬಾಯಿ ತೆರೆಯುತ್ತಿದ್ದ. ''ಹರೇ ರಾಮಾ ಹರೀ ಹರೀ'' ಎಂದು ದೇವರ ಪವಿತ್ರನಾಮ ಪಠಿಸುತ್ತ, ಆತ ತನ್ನ ಮಾತಿಗೆ ಪೀಠಿಕೆ ಹಾಕುತ್ತಿದ್ದ. ''ಇಂಥ ಕ್ರೂರ ಮನುಷ್ಯನನ್ನು ನಾನು ಈ ಜನ್ಮದಲ್ಲೇ ನೋಡಿಲ್ಲ. ಮಕ್ಕಳ ಬಗ್ಗೆಯಾಗಲಿ, ಪ್ರಾಣಿಗಳ ಬಗ್ಗೆಯಾಗಲಿ ಆತನಿಗೆ ಎಳ್ಳಷ್ಟೂ ಕನಿಕರವಿಲ್ಲ. ಹೀಗಿರುವಾಗ, ಆತನ ಸ್ವಂತ ಮಕ್ಕಳು ಮನೆ ಬಿಟ್ಟು ಓಡಿ ಹೋದುದರಲ್ಲಿ ಅಚ್ಚರಿಯೇನಿಲ್ಲ.'' ಎಂದು ಆ ಪಟೇಲ ತಗ್ಗಿದ ದನಿಯಲ್ಲಿ ಗೊಣಗಿದ.

ಏತನ್ಮಧ್ಯೆ, ಅವರ ಮಾತುಕತೆಯ ವಿಷಯ ಆತನ ಗುಡಿಸಲ ಕಡೆಗೆ ಹೊರಳಿತು, ನೆರೆಹೊರೆಯವರ ಮನೆಗಳಿಂದ ಒಂದಿಷ್ಟು ದೂರದಲ್ಲಿ, ಹರಕುಮುರುಕಲಾದ, ಆತನ ಒಂಟಿ ಗುಡಿಸಲು ಒಂದು ಸಂಕೇತರೂಪವಾಗಿ ನಿಂತುಕೊಂಡಿತ್ತು. ತನ್ನ ಆ ಗುಡಿಸಲಿನ ಕಿರುಗೋಡೆಗೆ ನೇಗಿಲನ್ನು ಆನಿಸಿ ಇಟ್ಟು, ಎದುರು ಅಂಗಳದಲ್ಲಿ ಗಟ್ಟಿಯಾಗಿ ಹುಗಿದಿದ್ದ ಎರಡು ಗೂಟಗಳಿಗೆ ಎತ್ತುಗಳನ್ನು ಕಟ್ಟಲೆಂದು ಹೋದ. ಇನ್ನೇನು ತನ್ನ ಗುಡಿಸಲೊಳಗೆ ಹೋಗಬೇಕೆನ್ನುವಷ್ಟರಲ್ಲಿ, ''ಭಾಯಿ, ರಹೀಮಖಾನ'' ಎಂಬ ವಿನೀತ ದನಿಯೊಂದು ಆತನ ಹಿಂದೆ ತೇಲಿ ಬಂತು, ''ಏನು? ಏನಾಯಿತು?'' ಗದರಿಸುವ ದನಿಯಲ್ಲಿ ಆತ ಕೇಳಿದ. ಹಿಂದಿರುಗಿ ನೋಡಿದಾಗ, ಓರ್ವ ಮುದುಕಿ ತನ್ನ ಮನೆ ಹತ್ತಿರ ಬಂದುದು ಕಾಣಿಸಿತು. ಆಕೆ ಮಾತಾಡಲು ತಡವರಿಸುತ್ತಿದ್ದಂತೆ, ಆತ ಆಕೆಗೆ ಪ್ರಶ್ನೆಗಳ ಸಿಡಿಮದ್ದನ್ನೇ ಸಿಡಿಸಿದ. ''ಏನಾಯಿತು ಹೇಳು? ನಾನೇನೂ ನಿನ್ನನ್ನು ತಿಂದು ಬಿಡುವುದಿಲ್ಲ. ಏ ಮುದುಕಿ ಏಕೆ ಸುಮ್ಮನೆ ನಿಂತಿರುವೆ? ಕಂದಾಯ ಬಾಕಿ ತುಂಬದ್ದಕ್ಕೆ ಮತ್ತೆ ನಿನ್ನ ಮಗನನ್ನು ಬಂಧಿಸಿದರೇನು? ಅಥವಾ ನಿನ್ನ ಸೊಸೆ ಇನ್ನೊಂದು ಮಗುವನ್ನು ಹೆತ್ತಳೆ?''